

ಹಿಡಿಯಷ್ಟಿರುವ ಹೃದಯ ಇಡೀ ದೇಹವನ್ನೇ ಹಿಡಿತದಲ್ಲಿಟ್ಟುಕೊಳ್ಳುತ್ತದೆ. ಎಲ್ಲೋ ಹುಟ್ಟಿದ ಸೂಕ್ಷ್ಮ ವೈರಸ್ಸೊಂದು ಇಡೀ ಜಗತ್ತನ್ನೇ ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡು ಅಲ್ಲಾಡಿಸಿದಂತೆ, ಪುಟ್ಟ ಹೃದಯದ ಚಲನವಲನಗಳು ದೇಹದ ಆಯುಸ್ಸನ್ನು ನಿರ್ಧರಿಸುತ್ತವೆ.

ಹಿಂದೆಲ್ಲಾ 60 ವರ್ಷ ದಾಟಿದವರಿಗೆ ಹೃದಯಾಘಾತವಾಗಿ ಮೃತಪಟ್ಟರೆ, 'ಅಯ್ಯೋ, ಇದು ಸಾಯುವ ವಯಸ್ಸಾ...' ಎಂದು ಜನ ಹುಬ್ಬೇರಿಸುತ್ತಿದ್ದರು. ಪರಿಸ್ಥಿತಿ ಈಗ ಬದಲಾಗಿದೆ. ಚೆನ್ನಾಗಿ ಓಡಾಡಿಕೊಂಡಿದ್ದ ನಡುವಯಸ್ಸಿನ ವ್ಯಕ್ತಿ, ನಾಳೆ 'ಇಲ್ಲ' ಎನ್ನುವ ಉದಾಹರಣೆಗಳು ಮತ್ತೆ ಮತ್ತೆ ಎದುರಾಗುತ್ತಿವೆ. ಮುಪ್ಪಿಗೆ ಮುನ್ನವೇ ಹೃದಯ ಕೈಕೊಡುತ್ತಿರುವ ನಿದರ್ಶನಗಳು, ಇಂದಿನ ಆರೋಗ್ಯದ ಸ್ಥಿತಿಗತಿ ಎತ್ತ ಸಾಗುತ್ತಿದೆ ಎಂಬುದನ್ನು ಸೂಚಿಸುತ್ತಿರುವಂತಿವೆ ಹಾಗೂ ಎಲ್ಲರ ಕಳವಳಕ್ಕೆ ಕಾರಣವಾಗಿವೆ.

ಹೃದಯ ಬಡಿತದಲ್ಲಿ ಏರುಪೇರು, ಹೃದಯದ ಉರಿಯೂತ, ರಕ್ತ ಹೆಪ್ಪುಗಟ್ಟುವಿಕೆ, ಪಾರ್ಶ್ವವಾಯು, ಹೃದಯಾಘಾತ, ಹೃದಯ ಸ್ತಂಭನ, ಹೃದಯ ವೈಫಲ್ಯ – ಎದೆಯೊಳಗೆ ಹುದುಗಿರುವ ಪುಟ್ಟ ಅಂಗದಲ್ಲಿ ಕಾಣಿಸಿಕೊಳ್ಳುವ ಯಾವುದೇ ರೀತಿಯ ಸಮಸ್ಯೆಯ ಪರಿಣಾಮ ದೊಡ್ಡದೇ ಆಗಿದ್ದು, ಬೆಚ್ಚಿಬೀಳಿಸುವಂತಿರುತ್ತದೆ.

ಹೃದಯಾಘಾತದಿಂದ ಕಿರಿಯ ವಯಸ್ಸಿನವರು ಸಾವಿಗೀಡಾಗುತ್ತಿದ್ದಾರೆ, ಅದರಲ್ಲೂ ಕುಟುಂಬದ ಆಧಾರ ಸ್ತಂಭಗಳೇ ಕುಸಿದು ಬೀಳುತ್ತಿವೆ. ಇಂಥ ಹೃದಯಾಘಾತಗಳಿಗೆ 'ಜೀವನಶೈಲಿ ಬದಲಾವಣೆಯೇ ಕಾರಣ' ಎಂದು ವೈದ್ಯರೂ ಸೇರಿದಂತೆ ಎಲ್ಲರೂ ಸರಳವಾಗಿ ಹೇಳಬಹುದು. ಆದರೆ, ಈ ಆಕಸ್ಮಿಕ ಸಾವುಗಳಿಗೆ ಕುಟುಂಬದ ಆರೋಗ್ಯ ಹಿನ್ನೆಲೆ, ವ್ಯಕ್ತಿಯ ವ್ಯಸನಗಳು, ಬೊಜ್ಜು, ಅತಿ ಕೊಲೆಸ್ಟ್ರಾಲ್ ಎಲ್ಲವೂ ಕಾರಣಗಳಾಗುತ್ತಿವೆ.

2022 ವರ್ಷದ ಆರಂಭದಿಂದಲೇ ಹೃದಯಾಘಾತಕ್ಕೊಳಗಾಗಿ ಸಾವಿನ ಕದ ತಟ್ಟಿದ ಕೆಲವು ಉದಾಹರಣೆಗಳನ್ನು ನೋಡೋಣ.

- ಜನವರಿ 1ರಂದು ಮೂಡಬಿದರೆಯ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಹೃದಯಾಘಾತದಿಂದ ಸಾವನ್ನಪ್ಪಿದಾಗ ಅವರ ವಯಸ್ಸು ಕೇವಲ 36.
- ಬಂಟ್ವಾಳ ತಾಲ್ಲೂಕು ವಿಟ್ಲ ಸಮೀಪದ ಅಳಿಕೆ ಶಾಲೆಯ ಒಂಬತ್ತನೇ ತರಗತಿ ವಿದ್ಯಾರ್ಥಿನಿ ಹೃದಯಾಘಾತಕ್ಕೊಳಗಾಗಿ ಅಸು ನೀಗಿದ್ದು ಆಕೆಯ 14ರ ಪ್ರಾಯದಲ್ಲಿ.
- ಕುಂದಾಪುರ ತಾಲ್ಲೂಕಿನ ಕೆರಾಡಿ ಗ್ರಾಮದಲ್ಲಿ ಜೂನ್ 30ರಂದು ಗದ್ದೆಯಲ್ಲಿ ಉಳುಮೆ ಮಾಡುತ್ತಿದ್ದ ವೇಳೆ ಟ್ರ್ಯಾಕ್ಟರ್ ಚಾಲಕ ಎದೆ ಹಿಂಡಿದಂತಾಗಿ ಕುಸಿದು ಬಿದ್ದು ಸಾವನ್ನಪ್ಪಿದ. ರೈತನ ಹರೆಯ ಬರೀ ನಲವತ್ತು.
- ಆಗಸ್ಟ್ 5ರಂದು ಕೆಎಸ್‌ಆರ್‌ಟಿಸಿ ಬೆಂಗಳೂರು ಕೇಂದ್ರ ಘಟಕದ ವ್ಯವಸ್ಥಾಪಕ ದಾವಣಗೆರೆಯಲ್ಲಿ ಹೃದಯಾಘಾತದಿಂದಲೇ ಮೃತಪಟ್ಟಿದ್ದು 33ರ ಹರೆಯದಲ್ಲಿ.
- ಆಗಸ್ಟ್ 22ರಂದು ಬೆಂಗಳೂರಿನಲ್ಲಿ 45 ವರ್ಷದ ಪತ್ರಕರ್ತ ಅಸುನೀಗಿದ್ದು ಹೃದಯಾಘಾತದಿಂದಲೇ.

ಮೇಲಿನವು ಕೆಲವು ಸ್ಯಾಂಪಲ್‌ಗಳಷ್ಟೇ. ರಾಜ್ಯದ ಪ್ರಮುಖ ಆಸ್ಪತ್ರೆ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 6ರವರೆಗೆ ಪ್ರತಿ ಐದು ನಿಮಿಷಕ್ಕೆ ಒಬ್ಬ ರೋಗಿ

